ಆ) ಸದರಿ ಅಬಿಯಾರಣ್ಯದ ರಕ್ಷಣೆ ಹಾಗೂ ವನ್ಯ ಪ್ರಾಣಿ ಸಂರಕ್ಷಣೆಯ ಬಗ್ಗೆ ವ್ಯವಸ್ಥೆ ಮಾಡಲಾಗಿದೆ.

ಇ) ಈ ಅಭಯಾರಣ್ಯದ ಮಧ್ಯದಲ್ಲಿ (೧) ಬಸವನಹಳ್ಳಿ (೨) ಸೋಲಗೆರೆ (೩)ಸಂಬಾಪುರ ಮತ್ತು (೪) ಕೋಣಗುಂದಿ ಎಂಬ ನಾಲ್ಕು ಗ್ರಾಮಗಳು ಬರುತ್ತವೆ. ಈ ಪ್ರದೇಶದಲ್ಲಿ ಇರತಕ್ಕ ರೈತರ ಜಮೀನಿನಲ್ಲಿ ಬೆಳೆದಿರುವ ಫಸಲನ್ನು ವನ್ಯಪ್ರಾಣಿಗಳ ಹಾವಳಿಯಿಂದ ನಾಶವಾಗುತ್ತಿದ್ದು ಬೆಳೆ ನಷ್ಟ ಹೊಂದಿದ್ದ ರೈತರುಗಳಿಗೆ ಇದುವರೆವಿಗೂ ಒಟ್ಟು ೯ ಪ್ರಕರಣಗಳಿಗೆ ರೂ ೩,೦೫೦ ಪರಿಹಾರ ಧನವನ್ನು ಮಂಜೂರು ಮಾಡಲಾಗಿದೆ.

ಈ) ಹೌದು.

ಕಳಪೆ ದರ್ಜೆಯ ಬೀಜಗಳ ಸರಬರಾಜು

೧೭೭ (೬೭೬) ಶ್ರೀ ಡಿ. ಜಿ. ಬಸವನಗೌಡ (ಹೊನ್ನಾಳಿ).—ಮಾನ್ಯ ವ್ಯವಸಾಯ ಮತ್ತು ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಕರ್ನಾಟಕ ರಾಜ್ಯ ಬೀಜ ನಿಗಮದವರು ಶಿವಮೊಗ್ಗ ಜಿಲ್ಲಾ ಹೊನ್ನಾಳಿ ತಾಲ್ಲೂಕಿನ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಸಹಾಯ ಧನದ ರೂಪದಲ್ಲಿ ಸರಬರಾಜು ಮಾಡಿದ ಬೀಜಗಳು ಕಳಪೆ ಯಾಗಿದ್ದು, ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಇದರಿಂದ ನೊಂದ ಬಡ ರೈತರಿಗೆ ಯಾವ ರೀತಿಯ ಪರಿಹಾರ ನೀಡಲಾಗುವುದು ?

ಶ್ರೀ ಬಿ. ರಾಚಯ್ಯ (ಕೃಷಿ ಮತ್ತು ಅರಣ್ಯ ಸಚಿವರು).—

ಅ) ಇಲ್ಲ ಸ್ವಾಮಿ.

ಆ) ಕೃಷಿ ಉತ್ಪಾದನೆ ಹೆಚ್ಚಿಸಲು ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ನೆರವು ನೀಡುವ ಯೋಜನೆಯಲ್ಲಿ ಕರ್ನಾಟಕ ರಾಜ್ಯ ಬೀಜ ನಿಗಮವು ಕಳಪೆ ಬಿತ್ತನೆ ಬೀಜವನ್ನು ಮಾರಾಟ ಮಾಡದೆ ಇರುವ ಕಾರಣ ಪರಿಹಾರ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ವಯಸ್ಸಾದ ಟಿ. ಸಿ. ಹೆಚ್. ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶ

೧೭೧ (೬೫೫) ಶ್ರೀ ಜಿ. ರಾಮದಾಸ್ (ಹೊಸದುರ್ಗ).—ಮಾನ್ಯ ಶಿಕ್ಷಣ ರಾಜ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಕರ್ನಾಟಕ ರಾಜ್ಯದಲ್ಲಿ ಟಿ. ಸಿ. ಹೆಚ್. ಪಾಸ್ ಮಾಡಿಕೊಂಡಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ?

ಆ) ಈ ವಿದ್ಯಾರ್ಥಿಗಳಲ್ಲಿ ವಯಸ್ಸಾದವರಿಗೆ ಉದ್ಯೋಗವನ್ನು ಕೊಡಲಿಕ್ಕೆ ಸರ್ಕಾರವು ಪ್ರಯತ್ನಿಸುವುದೇ ?

ಇ) ಹಾಗಿದ್ದರೆ ನಮ್ಮ ಕ್ಷೇತ್ರದಲ್ಲಿ ಎಷ್ಟು ಜನ ವಯಸ್ಸಾದವರಿಗೆ ಉದ್ಯೋಗ ಕೊಡಲು ಆಧ್ಯತೆ ನೀಡಲಾಗಿದೆ?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್(ಶಿಕ್ಷಣ ರಾಜ್ಯ ಮಂತ್ರಿಗಳು).—

ಅ) ಅಂಕಿ ಅಂಶಗಳು ಸಿದ್ಧವಾಗಿ ಲಭ್ಯವಿಲ್ಲ.

ಆ) ನೇಮಕಾತಿ ನಿಯಮಾವಳಿಗಳಲ್ಲಿ ನಿಗಧಿ ಪಡಿಸಿದ್ದ ಗರಿಷ್ಟ ವಯೋಮಿತಿಯನ್ನು ೧೦ ವರ್ಷಗಳಷ್ಟು ಹೆಚ್ಚಿಸಲಾಗಿದೆ.

ಇ) ನೇಮಕಾತಿ ನಿಯಮಾವಳಿಗಳಲ್ಲಿ ಈ ರೀತಿ ಅವಕಾಶವಿಲ್ಲ.